ಓ.ಎಸ್.ನಂ.**66/2016**

ಡಿ.ಡಬ್ಲೂ-**2**

ದಿನಾಂಕಃ **12.03.2024** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದಃ**

ದಿಃ **12.03.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಕೆ. ಎಸ್ ಬೀರೇಶ |
| ತಂದೆ/ಗಂಡನ ಹೆಸರು | ಶಂಕ್ರಪ್ಪ |
| ವಯಸ್ಸು | 48 ವರ್ಷ |
| ಕೆಲಸ | ಪತ್ರ ಬರಹಗಾರ |
| ವಾಸಸ್ಥಳ | ಕಲಕುಣಿಕೆ |

ನಾನು **2011-12** ರಿಂದ ಹುಣಸೂರು ತಾಲ್ಲೂಕು ಕಛೇರಿಯಲ್ಲಿ ಪತ್ರಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿ ಗೊತ್ತು. ನಿಡಿ-**1** ನ್ನು ನಾನೇ ತಯಾರಿಸುರುತ್ತೇನೆ. ಸದರಿ ಪತ್ರಕ್ಕೆ ನನ್ನ ಸಹಿ ಇದ್ದು ಸಾಕ್ಷಿ ಅದನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ-**1**(ಎ) ಎಂದು ಗುರುತಿಸಲಾಯಿತು. ಸದರಿ ನಿಡಿ-**1** ಹಕ್ಕು ಖುಲಾಸೆ ಪತ್ರ ಆಗಿರುತ್ತದೆ. ಸದರಿ ಪತ್ರವನ್ನು ನಮ್ಮ ಕಛೇರಿಯಲ್ಲಿರುವ ಗಣಕಯಂತ್ರದಲ್ಲಿ ತಯಾರಿಸಿರುತ್ತೇನೆ. ಸದರಿ ಪತ್ರಕ್ಕೆ ಮಾಹಿತಿಯನ್ನು ವಾದಿ ಮತ್ತು ಪ್ರತಿವಾದಿಯವರು ಬಂದು ನೀಡಿರುತ್ತಾರೆ ಹಾಗೂ ಪತ್ರಕ್ಕೆ ಸಹಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಅವರು ಯಾರು ಎಂದು ನನಗೆ ಈಗ ನೆನಪಿಲ್ಲ.

**ಪಾಟೀಸವಾಲುಃ**

ಪ್ರತಿವಾದಿ ಪರ ವಕೀಲರು ಹಾಜರಿದ್ದು, ಪಾಟೀಸವಾಲಿಗೆ ಕಾಲವಕಾಶವನ್ನು ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.